**(ದಿನಾಂಕ 04.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಂದುವರಿದ ಪಾಟೀ ಸವಾಲು ವಾದಿ ಪರ ಶ್ರೀ M. R. M. H. ವಕೀಲರಿಂದಃ-**

ಈ ದಿನ ನ್ಯಾಯಾಲಯಕ್ಕೆ ನಾನು ಯಾವುದೇ ಪೋನ ಪೇ ಮಾಡಿದ ದಾಖಲೆಗಳನ್ನು ಹಾಜರುಪಡಿಸಿಲ್ಲಾ. ಕೊಟ್ಟೂರು ಇಮಾಮ್ ಸಾಬ್ 16.11.1993 ರಂದು ಮರಣ ಹೊಂದಿರುತ್ತಾರೆ ಎಂದು ಮರಣ ಪ್ರಮಾಣ ಪತ್ರವು 22.11.1993 ನೋಂದಾಗಿದೆ ಎಂದರೆ ಅದು ತಪ್ಪಾಗಿರುತ್ತದೆ. 10.10.1994 ರಂದು ನಮ್ಮ ತಂದೆ ವಿಲ್ ಬರೆದುಕೊಟ್ಟಿರುತ್ತಾರೆ ಅಂತಾ ಹೇಳಿರುತ್ತೇನೆ ಎಂದರೆ ಸರಿ. ಸದರಿ ವಿಲ್ ನ್ನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 16.10.1993 ರಂದು ನನ್ನ ತಂದೆ ತೀರಿಕೊಂಡ ನಂತರ ನಾನು ಉದ್ದೇಶ ಪೂರ್ವಕವಾಗಿ ತಪ್ಪು ದಿನಾಂಕ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಕೊಟ್ಟೂರು ಇಮಾಮ್ ಸಾಬ್ 16.11.1993 ರಂದು ಮರಣ ಹೊಂದಿರುತ್ತಾರೆ ಎಂದು ನಿ ಪಿ 19 ರಂತೆ ನೀಡಿರುವ ಮರಣ ಪ್ರಮಾಣ ಪತ್ರವನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲಾ ಎಂದರೆ ಸರಿ. ಸರ್ವೆ ನಂಬರ 174/ಬಿ 1 ಎಕರೆ 14 ಸೆಂಟ್ಸ್ ಇರುತ್ತದೆ. ಸದರಿ ಆಸ್ತಿಯಲ್ಲಿ ನನ್ನ ಸಹೋದರರು ಯಾರು ಸ್ವಾಧೀನದಲ್ಲಿ ಇರುವುದಿಲ್ಲಾ. ಸರ್ವೆ ನಂಬರ 174/ಬಿ ನಲ್ಲಿ ಎಷ್ಟು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಸರಿಯಾಗಿ ಉತ್ತರ ಕೊಡುವುದಿಲ್ಲಾ. 80 ಅಡಿ x 30 ಅಡಿ ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿ ಚೆಕ್ ಬಂದಿ ಪೂರ್ವಕ್ಕೆ ನನ್ನದೇ ಜಾಗ, ಪಶ್ಚಿಮಕ್ಕೆ ನನ್ನದೇ ಜಾಗ, ಉತ್ತರಕ್ಕೆ ನನ್ನದೇ ಜಾಗ, ದಕ್ಷಿಣಕ್ಕೆ ಬಿ ಡಿ ಓ ಕಚೇರಿ ಕಾಂಪ್ಲೆಕ್ಸ್. ನಿ ಪಿ 21 ರಲ್ಲಿ ನನ್ನ ಸಹಿ ಇದೆ. ಅಜೀಜ್ ಸಾಬ್ ರವರು ಎಂದರೆ ನನ್ನ ಚಿಕ್ಕಪ್ಪ. ಅದರಲ್ಲಿ ತೋರಿಸಿರುವ ದಕ್ಷಿಣಕ್ಕೆ ಚೆಕ್ ಬಂದಿ ಅಜೀಜ್ ಸಾಬ್ ರವರ ಆಸ್ತಿ ಅಂತಾ ತೋರಿಸಿರುವುದು ತಪ್ಪಾಗಿರುತ್ತದೆ. ಡೋರ್ ನಂಬರ

1036 2 ಪೋಡ್ ಆಗಿರುತ್ತವೆ. 1036/3 ಅಂತಾ ಪ್ರತ್ಯೇಕ ನಂಬರ ಇದೆ ಎಂದರೆ ಒಂದೇ ನಂಬರ ಇರುತ್ತದೆ. ಎರಡು ಪೋಡಿನ ವಿಸ್ತೀರ್ಣ 80 x 35 ಅಡಿ 21 x 30 ಅಡಿ ಇರುತ್ತದೆ. ಡೋರ್ ನಂಬರ ಯಾವ ಆಧಾರದ ಮೇಲೆ ಬಂದಿರುತ್ತದೆ ಎಂದರೆ ವಿಲ್ ಆಧಾರದ ಮೇಲೆ ಬಂದಿರುತ್ತದೆ. ಭೂ ಪರಿವರ್ತನೆ  ನಾನು ನೀಡಿದ ಅರ್ಜಿ ಯಂತೆ ನಾನು ಕೊಟ್ಟಿರುವುದಿಲ್ಲಾ. ವಿಲ್ ಪ್ರಕಾರ ಭೂ ಪರಿವರ್ತನೆ ಆಗಿರುತ್ತದೆ. ಬುಡೇನ್ ಮತ್ತು ಶಾಕೀರ್ ನಡುವೆ ನನಗೆ ದ್ವೇಷ ಇಲ್ಲಾ. ಸಾಕ್ಷಿಗೆ ಪೋಟೋ ತೋರಿಸಿದಾಗ ಅದು ಕಾಣುವುದಿಲ್ಲಾ ಅಂತಾ ಹೇಳುತ್ತಾರೆ. ಸಾಕ್ಷಿಗೆ ಒಂದು ಪೋಟೋ ತೋರಿಸಿದಾಗ ಅದು ಅವರ ತಂದೆಯ ಘೋರಿ ಅಂತಾ ಒಪ್ಪಿಕೊಳ್ಳುತ್ತಾರೆ. ಸದರಿ ಪೋಟೋವನ್ನು ನಿ ಪಿ 22 ಅಂತಾ ಗುರುತಿಸಲಾಯಿತು. ಸದರಿ ಕಲ್ಲಿನಲ್ಲಿ ಮರಣ ದಿನಾಂಕದ ಮೇಲೆ ಕಪ್ಪು ಮಸಿ ಬಳೆಯಲಾಗಿದೆ ಎಂದರೆ ಸರಿ. ತಂದೆಯ ಮರಣ ದಿನಾಂಕವನ್ನು ಮುಚ್ಚುಹಾಕಲು ಕಲ್ಲನ್ನು ವಿರೂಪ ಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. 10.10.1994 ರಂದು ವಿಲ್ಲನ್ನು ನಾನು ದುರುದ್ದೇಷ ದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 174/ಬಿ ವಿಭಾಗ ಆಗಿದೆ ಎಂದರೆ ಸರಿಯಲ್ಲ. ನಿ ಪಿ 3 ರಂತೆ ಇಂದಿಗೂ ಸಹ ನನ್ನ ಅಣ್ಣ ತಮ್ಮಂದಿರ ಮತ್ತು ಚಿಕ್ಕಪ್ಪ ದೊಡ್ಡಪ್ಪನವರ ಮಕ್ಕಳ ಹೆಸರಿನಲ್ಲಿ ಪಹಣಿ ಆಗಿ ಬರುತ್ತಿದ್ದೆ ಎಂದರೆ ನನಗೆ ಗೊತ್ತಿಲ್ಲಾ. ನಿ ಪಿ 3 ನ್ನು ರದ್ದುಪಡಿಸಲು ಕಂದಾಯ ಇಲಾಖೆಗೆ ಅರ್ಜಿ ಕೊಟ್ಟಿರುತ್ತೇನೆ. ಅದಕ್ಕೆ ಸಂಬಂಧಿಸಿದ ದಾಖಲೆ ಹಾಜರುಪಡಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಸರ್ವೆ ನಂಬರ 174/ಬಿ 2 ಆಸ್ತಿಯನ್ನು ನಾನು ನನ್ನ ಪಾಲಿನ ಆಸ್ತಿ ಮಾರಾಟ ಮಾಡಿದ್ದು ಈಗ ನೂರ್ ಸಾಬ್ ರವರ ಸ್ವಾಧೀನವನ್ನು ತಪ್ಪಿಸಲು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಕಂದರ್ ಗೆ 15.05.2014 ರಂದು ನೋಂದಾದ ಸ್ವಾಧೀನ

ರಹಿತ ಕ್ರಯಕರಾರನ್ನು ಯಾರು ಯಾರು ಬರೆದುಕೊಟ್ಟಿದ್ದೀರಿ ಎಂದರೆ ನನ್ನ ಸಹೋದರರು ಬರೆದುಕೊಟ್ಟಿರುತ್ತಾರೆ ನಾನು ಸಹಿ ಮಾಡಿರುತ್ತೇನೆ. ಯಾವ ಆಸ್ತಿಯಲ್ಲಿ ಕರಾರು ಮಾಡಿರುತ್ತಾರೆ ಅಂತಾ ನನಗೆ ಗೊತ್ತಿಲ್ಲಾ. ನಿ ಪಿ 15 ರಲ್ಲಿ ನನ್ನ ಸಹಿ ಇದೆ. ನಿ ಪಿ 15 ರಲ್ಲಿ ಕೆ ಇಮಾಮ್ ಸಾಬ್ ನ ಮಕ್ಕಳು ದಾದಾ ಸಾಬ್ ನೂರ್ ಸಾಬ್ ಮೂರು ಜನ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶ ದಿಂದ ಉಳಿದ ಪ್ರತಿವಾದಿಯರೊಂದಿಗೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಅಣ್ಣ ತಮ್ಮಂದಿರಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುರಸಭೆಯವರ ಪ್ರಭಾವವನ್ನು ಬಳಸಿ ಅಲ್ಲಿ ಸಹ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.